**ದಿನಾಂಕಃ 06-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಕೆ ಸಿ ಹೆಚ್ ವಕೀಲರಿಂದಃ**

ಪಿ ಡಬ್ಲ್ಯೂ 1 ನೇ ದವರರಿಗೆ ನಾನು ಪರೀಕ್ಷೆ ಮಾಡಿ ಅವರಿಗೆ ನಿ ಪಿ -10 ರಂತೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿದ್ದೇನೆ. ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ -10 ಎ ಎಂದು ಗುರುತಿಸಲಾಯಿತು.

ಪಿ ಡಬ್ಲ್ಯೂ 2 ನೇ ದವರರಿಗೆ ನಾನು ಪರೀಕ್ಷೆ ಮಾಡಿ ಅವರಿಗೆ ನಿ ಪಿ -18 ರಂತೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿದ್ದೇನೆ. ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ -18 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ**

ಎಮ್ ವಿ ಸಿ ನಂ.779/2021 ರಲ್ಲಿಯ ಅರ್ಜಿದಾರರಾದ ಪಿ ಡಬ್ಲ್ಯೂ-1 ಗೆ ನಾನು ಕೇವಲ ಅಂಗನ್ಯೂನತ ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ನಾನು ಅವರಿಗೆ ಅಪಘಾತವಾದ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವು ದಿನಾಂಕ 26.08.2020 ರಂದು ಆಗಿರುತ್ತದೆ ಎಂದರೆ ಸರಿ. ಅಂಗನ್ಯೂನತ ಪ್ರಮಾಣ ಪತ್ರದಲ್ಲಿ ತೋರಿಸಿದ ದಿನಾಂಕ ಮತ್ತು ಅದರಲ್ಲಿ ಬರೆದ ವಿವರಗಳು ಬೇರೆ ಬೇರೆ ಇಂಕ್ ನಲ್ಲಿವೆ ಎಂದರೆ ಸರಿ. ತಾವು ಅನೇಕ ಪ್ರಕರಣಗಳಲ್ಲಿ ಅಂಗನ್ಯೂನತ ಪ್ರಮಾಣ ಪತ್ರ ನೀಡಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಚಿಕಿತ್ಸೆ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಬಿಲ್ಲು ಎಕ್ಸರೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ತೆಗೆದ ಎಕ್ಸರೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಮೂಲ ಎಕ್ಸರೆಗಳನ್ನು ನೋಡಿದಾಗ ಮಾತ್ರ ಮೂಳೆ ಮುರಿತ ಆಗಿದೆಎಂದು ತಿಳಿಯುತ್ತದೆ ಎಂದರೆ ಸರಿ. ಡಿಸ್ಚಾರ್ಜ ಸಮ್ಮರಿಯಲ್ಲಾಗಲೀ ಮತ್ತು ಗಾಯದ ಪ್ರಮಾಣ ಪತ್ರದಲ್ಲಿ ಯಾವ ತರಹದ ಮೂಳೆ ಮುರಿತ ಆಗಿದೆ ಎಂದು ಇಲ್ಲ ಎಂದರೆ ಸರಿ. ಮೂಳೆ ಮುರಿತದ ಆಧಾರದ ಮೇಲೆ ಅಂಗನ್ಯೂನತ ಪ್ರಮಾಣ ಪತ್ರ ನಿರ್ಧಾರವಾಗುತ್ತದೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಕ್ಷ ಕಿರಣ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಸದರಿ ವಿಭಾಗಕ್ಕೆ ಕ್ಷ ಕಿರಣಗಳನ್ನು ತೆಗೆಯಲು ಕಳುಹಿಸಿಕೊಟ್ಟರೇ ಅವುಗಳನ್ನು ತೆಗೆದು ಅಬಿಪ್ರಾಯಗಳನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ಎಕ್ಸರೆ ಜೊತೆ ನನ್ನ ಅಬಿಪ್ರಾಯಗಳನ್ನು ಕೊಟ್ಟಿದ್ದೇನೆ ಎಂದರೆ ನಿಜ. ಬೇರೆ ವೈದ್ಯರು ಮುಂದಿನ ಚಿಕಿತ್ಸೆ ಕೊಟ್ಟ ಬಗ್ಗೆ

ನಾನು ದಾಖಲೆಗಳನ್ನು ನೋಡಿರುತ್ತೇನೆ. ನಾನು ಯಾವುದೇ ಅಂತಹ ದಾಖಲೆಗಳನ್ನು ನೋಡದೇ ಇದ್ದರೂ ಸಹ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಖೊಟ್ಟಿ ಗಾಯದ ಪ್ರಮಾಣ ಪತ್ರ ವನ್ನು ಹಾಗೂ ಬಿಡುಗಡೆ ಸಾಂರಾಂಶವನ್ನು ಪಡೆದುಕೊಂಡು ಖೊಟ್ಟಿ ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಗಾಯವಾಗಿ 5 ವರ್ಷ ಕಳೆದರೆ ಅವರಿಗೆ ಅಂಗನ್ಯೂನತೆ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಬರದೇ ಇದ್ದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎಮ್ ವಿ ಸಿ ನಂ.780/2021 ರಲ್ಲಿಯ ಅರ್ಜಿದಾರರಾದ ಪಿ ಡಬ್ಲ್ಯೂ-2 ಗೆ ನಾನು ಕೇವಲ ಅಂಗನ್ಯೂನತ ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ನಾನು ಅವರಿಗೆ ಅಪಘಾತವಾದ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವು ದಿನಾಂಕ 26.08.2020 ರಂದು ಆಗಿರುತ್ತದೆ ಎಂದರೆ ಸರಿ. ಅಂಗನ್ಯೂನತ ಪ್ರಮಾಣ ಪತ್ರದಲ್ಲಿ ತೋರಿಸಿದ ದಿನಾಂಕ ಮತ್ತು ಅದರಲ್ಲಿ ಬರೆದ ವಿವರಗಳು ಬೇರೆ ಬೇರೆ ಇಂಕ್ ನಲ್ಲಿವೆ ಎಂದರೆ ಸರಿ. ತಾವು ಅನೇಕ ಪ್ರಕರಣಗಳಲ್ಲಿ ಅಂಗನ್ಯೂನತ ಪ್ರಮಾಣ ಪತ್ರ ನೀಡಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಚಿಕಿತ್ಸೆ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಬಿಲ್ಲು ಎಕ್ಸರೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ತೆಗೆದ ಎಕ್ಸರೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಮೂಲ ಎಕ್ಸರೆಗಳನ್ನು ನೋಡಿದಾಗ ಮಾತ್ರ ಮೂಳೆ ಮುರಿತ ಆಗಿದೆಎಂದು ತಿಳಿಯುತ್ತದೆ ಎಂದರೆ ಸರಿ. ಡಿಸ್ಚಾರ್ಜ ಸಮ್ಮರಿಯಲ್ಲಾಗಲೀ ಮತ್ತು ಗಾಯದ ಪ್ರಮಾಣ ಪತ್ರದಲ್ಲಿ ಯಾವ ತರಹದ ಮೂಳೆ ಮುರಿತ ಆಗಿದೆ ಎಂದು ಇಲ್ಲ ಎಂದರೆ ಸರಿ. ಮೂಳೆ ಮುರಿತದ ಆಧಾರದ ಮೇಲೆ ಅಂಗನ್ಯೂನತ ಪ್ರಮಾಣ ಪತ್ರ ನಿರ್ಧಾರವಾಗುತ್ತದೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಕ್ಷ ಕಿರಣ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಸದರಿ ವಿಭಾಗಕ್ಕೆ ಕ್ಷ ಕಿರಣಗಳನ್ನು ತೆಗೆಯಲು ಕಳುಹಿಸಿಕೊಟ್ಟರೇ ಅವುಗಳನ್ನು ತೆಗೆದು ಅಭಿಪ್ರಾಯಗಳನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ಎಕ್ಸರೆ ಜೊತೆ ನನ್ನ ಅಭಿಪ್ರಾಯಗಳನ್ನು ಕೊಟ್ಟಿದ್ದೇನೆ ಎಂದರೆ ನಿಜ. ಬೇರೆ ವೈದ್ಯರು ಮುಂದಿನ ಚಿಕಿತ್ಸೆ ಕೊಟ್ಟ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ನಾನು ಯಾವುದೇ ಅಂತಹ ದಾಖಲೆಗಳನ್ನು ನೋಡದೇ ಇದ್ದರೂ ಸಹ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಖೊಟ್ಟಿ ಗಾಯದ ಪ್ರಮಾಣ ಪತ್ರ ವನ್ನು ಹಾಗೂ ಬಿಡುಗಡೆ ಸಾಂರಾಂಶವನ್ನು ಪಡೆದುಕೊಂಡು ಖೊಟ್ಟಿ ಅಂಗನ್ಯೂನತೆ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ

ಗಾಯವಾಗಿ 5 ವರ್ಷ ಕಳೆದರೆ ಅವರಿಗೆ ಅಂಗನ್ಯೂನತೆ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಬರದೇ ಇದ್ದರೂ ಸಹ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.